## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ
## ಘನ ನ್ಯಾಯಾಲಯದಲ್ಲಿ

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್** *127/2022*

ದಿನಾಂಕಃ *11.01.2024*
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪ್ರಾ.ಸಾಃ *4* (ಚಾ.ಸಾ.*8*)

| | | |
|---|---|---|
| ಹೆಸರು | ಃ | **ಸುನೀಲ** ಕುಮಾರ ಎ.ಆರ್. |
| ತಂದೆಯ ಹೆಸರು | ಃ | ರಾಮಕೃಷ್ಣೇಗೌಡ |
| ವಯಸ್ಸು | ಃ | *31* ವರ್ಷ |
| ಉದ್ಯೋಗ | ಃ | ಪಿಸಿ *661*, ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ ಸ್ಥಳ | ಃ | **ಪೊಲೀಸ್ ಕ್ವಾಟ್ರಸ್** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿಃ*27.01.2021* ರಿಂದ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಸಿ. ಆಗಿ ನಾನು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

*2.* ದಿಃ *24.05.2022* ರಂದು ರಾತ್ರಿ *08.45* ಗಂಟೆಗೆ ಠಾಣಾಧಿಕಾರಿಯವರು ಈ ಪ್ರಕರಣದ ಪ್ರ.ವ.ವ.ಯನ್ನು ಮಾನ್ಯ ನ್ಯಾಯಾಲಯಕ್ಕೆ ಕೊಟ್ಟು ಬರುವಂತೆ ತಿಳಿಸಿದರು. ಆ ಪ್ರಕಾರ ರಾತ್ರಿ *09.00* ಗಂಟೆಗೆ ನಾನು ನ್ಯಾಯಾಧೀಶರ ವಸತಿ ಗೃಹಕ್ಕೆ ಒಯ್ದು ಕೊಟ್ಟು ಬಂದಿರುತ್ತೇನೆ. ಸದರಿ ಪ್ರ.ವ.ವ. ನಿಪಿ *4* ಇರುತ್ತದೆ.

*3.* ದಿಃ*01.06.2022* ರಂದು ಚಾಸಾ *1* ರವರ ಸೂಚನೆಯಂತೆ ಮಾನ್ಯ *1* ನೇ ಅಪರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಈ ಕೇಸಿನ ಗಾಂಜಾಗೆ ಸಂಬಂಧಪಟ್ಟಂತೆ ಇನ್ವೆಂಟರಿ ಮಾಡಿಸಲು ಠಾಣೆಗೆ ನೀಡಿದಂತೆ ಹ್ಯಾಂಡಿ ಕ್ಯಾಮ್ ನ್ನು ಚಾಸಾ *1* ರವರಿಂದ ಪಡೆದುಕೊಂಡು, ಇನ್ವೆಂಟರಿ ಕಾಲಕ್ಕೆ ಫೋಟೋ ಮತ್ತು ವಿಡಿಯೋ ಮಾಡಲು ನೇಮಕ ಮಾಡಿದರು. ಅದೇ ದಿನ ಇನ್ವೆಂಟರಿ ಕಾಲಕ್ಕೆ ವಿಡಿಯೋಗ್ರಫಿ ಮಾಡಿ ಫೋಟೋ ತೆಗೆದೆನು. ಸಾಕ್ಷಿ ಗುರುತಿಸಿದ *3*

ಫೋಟೋಗಳನ್ನು ನಿಪಿ ***5, 6*** ಮತ್ತು ***7*** ಎಂದು, ಸಿ.ಡಿ.ಯನ್ನು ನಿಪಿ ***8*** ಎಂದು ಗುರುತಿಸಲಾಯಿತು.

***4.*** ಭಾರತೀಯ ಸಾಕ್ಷ್ಯ ಅಧಿನಿಯಮ ಕಾಲಂ ***65*** ಬಿ ರಡಿಯಲ್ಲಿ ಪ್ರಮಾಣ ಪತ್ರ ಕೊಟ್ಟಿದ್ದೇನೆ (ಸದರಿ ಪ್ರಮಾಣ ಪತ್ರಕ್ಕೆ ಸದರಿ ಸಿಡಿ ಕೊಟ್ಟಂತಹ ಈ ಸಾಕ್ಷಿಯ ಸಹಿ ಇರುವುದಿಲ್ಲ).

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಟಿ.ಜಿ., ವಕೀಲರಿಂದಃ</u>**

***5.*** ನಾನು ವಿಡಿಯೋಗ್ರಫಿ ಮತ್ತು ಫೋಟೋಗ್ರಫಿಯಲ್ಲಿ ಅನುಭವ ಹೊಂದಿದ್ದ ಬಗ್ಗೆ ಪ್ರಮಾಣ ಪತ್ರ ಹೊಂದಿರುವುದಿಲ್ಲ. ಟ್ರೈನಿಂಗ್ ಕೊಟ್ಟಿದ್ದಾರೆ, ಆದರೆ ಸರ್ಟಿಫಿಕೇಟ್ ಕೊಟ್ಟಿಲ್ಲ. ನಾನು ಯಾವುದೇ ಫೋಟೋಗಳನ್ನಾಗಲೀ, ವಿಡಿಯೋಗಳನ್ನಾಗಲೀ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ ***5, 6*** ಮತ್ತು ***7*** ಫೋಟೋಗಳಲ್ಲಿ ಫೋಟೋ ತೆಗೆದ ದಿನಾಂಕ, ಸಮಯ ನಮೂದಾಗಿಲ್ಲ ಎಂದರೆ ಸರಿ.

***6.*** ಸೆಕ್ಷೆನ್ ***65*** ಬಿ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ನನ್ನ ಮೇಲಾಧಿಕಾರಿಗಳು ಸುಳ್ಳು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

***<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**